## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಅಬಕಾರಿ ಭದ್ರತಾ ಚೀಟಿಗಳನ್ನು ಮುದ್ರಿಸಿ ಸರಬರಾಜು ಮಾಡುವ ಕಾರ್ಯದ ಮೇಲ್ವಿಚಾರಣೆಗೆ ಹೊಸ ಹುದ್ದೆಗಳನ್ನು ಸೃಜಿಸುವ ಬಗ್ಗೆ

ಓದಲಾಗಿದೆ:- ಅಬಕಾರಿ ಆಯುಕ್ತರ ಪತ್ರ ಸಂ.ಇಸಿಇ/08/ಟಿಎಂಪಿ/2013-14 ದಿನಾಂಕ 30-10-2013 ಮತ್ತು 31-12-2013.

ಪ್ರಸ್ತಾವನೆ:-

ಅಬಕಾರಿ ಭದ್ರತಾ ಚೀಟಿಗಳನ್ನು ಈ ಮುಂಚೆ ಮೆ:ಎಂಸಿಎ ಇವರ ಮೂಲಕ ಮುದ್ರಿಸಿ ಸಂಗ್ರಹಿಸುತ್ತಿದ್ದ ವ್ಯವಸ್ಥೆಯನ್ನು ರದ್ದುಗೊಳಿಸಿ, ಕೆಟಿಟಿಪಿ ಕಾಯ್ದೆಯನ್ವಯ ಟೆಂಡರ್ ಮೂಲಕ ಮುದ್ರಣ ಮತ್ತು ಸರಬರಾಜು ವ್ಯವಸ್ಥೆಯನ್ನು ಮಾಡಲು ಸರ್ಕಾರವು ಆದೇಶಿಸಿದ್ದು, ಈ ಕಾರ್ಯವು ರಾಜಸ್ವ ಹಿತದೃಷ್ಟಿಯಿಂದ ಅಬಕಾರಿ ಇಲಾಖೆಯ ಮೇಲುಸ್ತುವಾರಿಯಲ್ಲಿಯೇ ಇರಬೇಕಾಗುತ್ತದೆ. ಅಬಕಾರಿ ಭದ್ರತಾ ಚೀಟಿಗಳನ್ನು ಮುದ್ರಿಸುವ ಕಾರ್ಯಕ್ಕೆ ಸೂಕ್ತ ಸ್ಥಳಾವಕಾಶ, ವಿದ್ಯುತ್ ಸೌಕರ್ಯ ಹಾಗೂ ಇತರ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗುತ್ತದೆಂದೂ, ಮತ್ತು ಈ ಕಾರ್ಯದ ಮೇಲ್ವಿಚಾರಣೆಗೆ ಪ್ರತ್ಯೇಕ ಅಧಿಕಾರಿ/ನೌಕರರನ್ನು ನಿಯೋಜಿಸಬೇಕಾಗುತ್ತದೆಂದೂ, ಅಬಕಾರಿ ಆಯುಕ್ತರ ಕಛೇರಿಯನ್ನು ಟಿಟಿಎಂಸಿ 'ಎ' ಬ್ಲಾಕ್, ಬಿಎಂಟಿಸಿ ಕಟ್ಟಡ, ಶಾಂತಿನಗರ ಇಲ್ಲಿಗೆ ಸ್ಥಳಾಂತರಿಸಲಾಗಿದ್ದು, ಈ ಕಟ್ಟಡದಲ್ಲಿ ಈ ಉದ್ದೇಶಕ್ಕಾಗಿ ಅಗತ್ಯ ಸ್ಥಳಾವಕಾಶ ಮತ್ತು ಎಲ್ಲಾ ಮೂಲಭೂತ ಸೌಕರ್ಯಗಳಿದ್ದು, ಅಧಿಕಾರಿ ಮತ್ತು ಸಿಬ್ಬಂದಿಯ ನಿಯೋಜನೆ ಬಾಕಿ ಉಳಿದಿರುತ್ತದೆಂದೂ, ಈ ಕಾರ್ಯದ ಮೇಲ್ವಿಚಾರಣೆ ನಡೆಸಲು ಹೊಸ ಹುದ್ದೆಗಳನ್ನು ಸೃಜಿಸುವುದು ಅವಶ್ಯಕವಿರುವುದರಿಂದ, ಈ ಕೆಳಗಿನಂತೆ ಅಧಿಕಾರಿ/ಸಿಬ್ಬಂದಿಯ ಹುದ್ದೆಗಳನ್ನು ಸೃಜಿಸುವಂತೆ ಮೇಲೆ ಓದಲಾದ ಪತ್ರಗಳಲ್ಲಿ ಅಬಕಾರಿ ಆಯುಕ್ತರು ಸರ್ಕಾರವನ್ನು ಕೋರಿದ್ದಾರೆ. ಈ ಪ್ರಸ್ತಾವನೆಯಿಂದ ವಾರ್ಷಿಕ ರೂ.35.02 ಲಕ್ಷಗಳಷ್ಟು ಆವರ್ತಕ ವೆಚ್ಚ ಉಂಟಾಗುವುದೆಂದು ತಿಳಿಸಿರುತ್ತಾರೆ.

| ಕ್ರ. ಸಂ. | ಹುದ್ದೆ ಮತ್ತು ವೇತನ ಶ್ರೇಣಿ | ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ |
|---|---|---|
| 1. | ಅಬಕಾರಿ ಅಧೀಕ್ಷಕರು<br>ವೇತನ ಶ್ರೇಣಿ ರೂ.28100-50100 | 1 |
| 2. | ಅಬಕಾರಿ ನಿರೀಕ್ಷಕರು<br>ವೇತನ ಶ್ರೇಣಿ ರೂ.20000-36300 | 2 |
| 3. | ಪ್ರಥಮ ದರ್ಜೆ ಸಹಾಯಕರು<br>ವೇತನ ಶ್ರೇಣಿ ರೂ.14550-26700 | 1 |
| 4. | ಬೆರಳಚ್ಚುಗಾರ<br>ವೇತನ ಶ್ರೇಣಿ ರೂ.11600-21000 | 1 |
| 5. | ಅಬಕಾರಿ ರಕ್ಷಕರು<br>ವೇತನ ಶ್ರೇಣಿ ರೂ.11600-21000 | 6 |
| | ಒಟ್ಟು | 11 |

ಸರ್ಕಾರದ ಹಂತದಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಮುಂದಿನಂತೆ ಆದೇಶಿಸಿದೆ.

ಮುಂದುವರೆದಿದೆ...

**ಸರ್ಕಾರದ ಆದೇಶ ಸಂ.ಎಫ್‌ಡಿ 181 ಇಪಿಎಸ್ 2013, ಬೆಂಗಳೂರು, ದಿನಾಂಕ 13–06–2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಅಬಕಾರಿ ಭದ್ರತಾ ಚೀಟಿಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್ ಮೂಲಕ ಏಜೆನ್ಸಿಯನ್ನು ಗೊತ್ತುಪಡಿಸಿ, ಇಲಾಖೆಯು ಒದಗಿಸುವ ಸ್ಥಳಾವಕಾಶದಲ್ಲಿ ಕಾರ್ಯನಿರ್ವಹಿಸುವುದನ್ನು ಮೇಲ್ವಿಚಾರಣೆ ನಡೆಸಲು ಅಬಕಾರಿ ಇಲಾಖೆಯಲ್ಲಿ ಈ ಕೆಳಕಂಡ ಹೊಸ ಹುದ್ದೆಗಳನ್ನು ಸೃಜಿಸಲು ಸರ್ಕಾರವು ಮಂಜೂರಾತಿ ನೀಡಿದೆ.

| ಕ್ರ. ಸಂ. | ಹುದ್ದೆ ಮತ್ತು ವೇತನ ಶ್ರೇಣಿ | ಸೃಜಿಸಲಾದ ಹುದ್ದೆಗಳ ಸಂಖ್ಯೆ |
|---|---|---|
| 1. | ಅಬಕಾರಿ ಅಧೀಕ್ಷಕರು<br>ವೇತನ ಶ್ರೇಣಿ ರೂ.28100–50100 | 1 |
| 2. | ಅಬಕಾರಿ ನಿರೀಕ್ಷಕರು<br>ವೇತನ ಶ್ರೇಣಿ ರೂ.20000–36300 | 2 |
| 3. | ಪ್ರಥಮ ದರ್ಜೆ ಸಹಾಯಕರು<br>ವೇತನ ಶ್ರೇಣಿ ರೂ.14550–26700 | 1 |
| 4. | ಬೆರಳಚ್ಚುಗಾರ<br>ವೇತನ ಶ್ರೇಣಿ ರೂ.11600–21000 | 1 |
| 5. | ಅಬಕಾರಿ ರಕ್ಷಕರು<br>ವೇತನ ಶ್ರೇಣಿ ರೂ.11600–21000 | 6 |
| | ಒಟ್ಟು | 11 |

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಸಿಬ್ಬಂದಿ–1)ಯು ಅನಧಿಕೃತ ಟಿಪ್ಪಣಿ ಸಂ.ಸಿಆಸುಇ 177 ಸಿಶಾಸೇ 2014 ದಿನಾಂಕ 21–4–2014ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

[ಎಂ.ಎನ್.ಬಾನೊಳ್ಳಿ]
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ),
ಆರ್ಥಿಕ ಇಲಾಖೆ (ಅಬಕಾರಿ)

ಇವರಿಗೆ,

ಅಬಕಾರಿ ಆಯುಕ್ತರು, ಬೆಂಗಳೂರು.
ಪ್ರಧಾನ ಮಹಾಲೇಖಪಾಲರು(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
ಅಧೀನ ಕಾರ್ಯದರ್ಶಿ, ಸಿಆಸುಇ(ಸಿಬ್ಬಂದಿ).
ಶಾಖಾ ರಕ್ಷಿತ ಕಡತ/ಹೆಚ್ಚುವರಿ ಪ್ರತಿ.

ದ. ಮುಂದಿನ ಕ್ರಮಕ್ಕಾಗಿ.

16/6/14

17/6/14